# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಸಿ.ಸಿ ನಂ.270-2015** **ಪಿ. ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎನ್ ರಾಮಲಿಂಗು<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 16-01-2021. |

**ಪಾಟೀ ಸವಾಲುಃ ಶ್ರೀ ಎಸ್.ಬಿ. ವಕೀಲರಿಂದಃ**

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಆರೋಪಿ ನನಗೆ ಸುಮಾರು 15-20 ವರ್ಷಗಳಿಂದ ಪರಿಚಿತರಿರುತ್ತಾರೆ. ಆರೋಪಿ ತನಗೆ ಆರ್ಥಿಕ ತೊಂದರೆ ಇದೆ ಎಂದು ಹೇಳಿ ನನ್ನಿಂದ ಸದರಿ ಸಾಲ ಪಡೆದುಕೊಂಡಿರುತ್ತಾನೆ. ಈ ವಿಚಾರವನ್ನು ನಾನು ನನ್ನ ಪಿರ್ಯಾದಿನಲ್ಲಾಗಲಿ, ನೋಟಿಸ್ ನಲ್ಲಾಗಲಿ, ಮುಖ್ಯ ವಿಚಾರೆ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ.

2. ನಾನು ಆದಾಯ ತೆರಿಗೆ ಪಾವತಿಸುತ್ತೇನೆ ಎಂದರೆ ಸರಿ.ಆರೋಪಿಗೆ ಸದರಿ ಸಾಲ ನೀಡಿದ ಬಗ್ಗೆ ನಾನು ನನ್ನ ಆದಾಯ ತೆರಿಗೆ ರಿಟನ್ಸ್‌ನಲ್ಲಿ ನಮೂದು ಮಾಡಿದ್ದೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಡಿಸೆಂಬರ್ 2012 ರಿಂದ ಜನವರಿ 2013 ರವರೆಗಿನ ನನ್ನ ಬ್ಯಾಂಕ್ ಪಾಸ್ ಬುಕ್ ಎಕ್ಸ್ ಟ್ರಾಕ್ಟ್ ನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ಆರೋಪಿ ಮಳಿಯಮ್ಮ ಸಾ ಮೀಲ್ ನ ಮಾಲೀಕರು ಎಂಬ ವಿಚಾರ ನನಗೆ ಗೊತ್ತು. ನನಗೆ ಎನ್ ನಾರಾಯಣ್ ಎಂಬ ಒಬ್ಬ ಸಹೋದರನಿದ್ದಾನೆ ಎಂದರೆ ಸರಿ. ನನ್ನ ತಮ್ಮ ಗುತ್ತಿಗೆದಾರರು ಹಾಗೂ ವ್ಯವಸಾಯವನ್ನು ಸಹ ಮಾಡುತ್ತಾರೆ. ನನ್ನ ತಮ್ಮ ಲೇವಾ-ದೇವಿ ವ್ಯವಹಾರ ಮಾಡುತ್ತಾನೆ ಎಂದರೆ ಸರಿಯಲ್ಲ. ನನ್ನ ತಮ್ಮ ಇದೇ ನ್ಯಾಯಾಲಯದಲ್ಲಿ ಅನೇಕರ ವಿರುದ್ಧ ಚೆಕ್ ಬೌನ್ಸ್‌ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

ಆರೋಪಿ ಡಿಸೆಂಬರ್ 2012 ರಲ್ಲಿ ತನಗೆ ರೂ.5,00,000/- ಸಾಲ ಬೇಕೆಂದು ಕೇಳಿಕೊಂಡಿದ್ದ ನಂತರ ದಿ. 25-01-2013 ರಂದು ನಾನು ರೂ. 4,80,000/- ಗಳನ್ನು ಸಾಲವಾಗಿ ನೀಡಿರುತ್ತೇನೆ. ಆರೋಪಿ ಡಿಸೆಂಬರ್ 2012 ರಲ್ಲಿ ತನಗೆ ರೂ.5,00,000/- ಸಾಲ ಬೇಕೆಂದು ಕೇಳಿಕೊಂಡಿದ್ದ ಎಂದು ನಾನು ನನ್ನ ಪಿರ್ಯಾದಿನಲ್ಲಿ ತಿಳಿಸಿಲ್ಲ ಎಂದರೆ ಸರಿ. ಆರೋಪಿಗೆ ನಾನು ಯಾವುದೇ ಸಾಲ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಯಾವುಲೇ ಸಾಲ ಪಡೆದಿಲ್ಲ, ಆತನ ನನಗೆ ನಿಪಿ-1 ನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ನಿಪಿ-3 ಕ್ಕೆ ನಿಮ್ಮ ವಕೀಲರಿಗೆ ಪ್ರತ್ಯುತ್ತರ ನೋಟಿಸ್ ನೀಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿ ನನ್ನ ತಮ್ಮನ ಬಳಿ ರೂ.10,000/- ಸಾಲ ಪಡೆದು ಆ ಸಾಲದ ಬಾಬ್ತು ನಿಪಿ-1 ನ್ನು ನನ್ನ ತಮ್ಮನಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ರೂ.10,000/- ಸಾಲವನ್ನು ಆರೋಪಿ ನನ್ನ ತಮ್ಮನಿಗೆ ಮರುಪಾವತಿ ಮಾಡಿದ್ದರು ಸಹ ನಿಪಿ-1 ನ್ನು ದುರುಪಯೋಗಪಡಿಸಿಕೊಂಡು ನನ್ನ ತಮ್ಮ ನನ್ನ ಮುಖಾಂತರ ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಮ್ಮ ಈಗಾಗಲೇ ಹಲವರ ವಿರುದ್ಧ ಚೆಕ್ ಬೌನ್ಸ್ ಪ್ರಕರಣವನ್ನು ದಾಖಲಿಸಿದ್ದರಿಂದ ಈ ಪ್ರಕರಣವನ್ನು ನನ್ನ ಮೂಲಕ ದಾಖಲಿಸಿದ್ದಾನೆ ಎಂದರೆ ಸರಿಯಲ್ಲ.

4. ಸಾಮಾನ್ಯವಾಗಿ ಯಾರಿಗಾದರು ರೂ.25,000/- ಕ್ಕಿಂತ ಹೆಚ್ಚಿನ ಹಣವನ್ನು ಪಾವತಿ ಮಾಡುವಾಗ ಚೆಕ್ ಮುಖಾಂತರ ನೀಡಬೇಕು ಎಂಬ ಹರಿವು ನನಗೆ ಇದೆ. ಆರೋಪಿ ತನಗೆ ತುಂಬಾ ಅವಶ್ಯಕತೆ ಇದೆ ಎಂದು ಕೇಳಿಕೊಂಡಿದ್ದರಿಂದ ನಾನು ಸದರಿ ಸಾಲವನ್ನು ನಗದು ರೂಪದಲ್ಲಿ ಪಾವತಿ ಮಾಡಿರುತ್ತೇನೆ. ದಿ.25-01-2013 ರಂದು ನನ್ನ ಬಳಿ ಅಷ್ಟು ಹಣ ಇತ್ತು ಎಂದು ತೋರಿಸಲು ನ್ಯಾಯಾಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಇರುವ ಒಕ್ಕಣೆಗಳು ಹಾಗೂ ನಿಪಿ-1(ಎ) ಬೇರೆ ಬೇರೆ ಶಾಹಿ ಯಲ್ಲಿ ಬರೆಯಾಲಗಿದೆ ಎಂದರೆ ಸಾಕ್ಷಿಯು ಆರೋಪಿಯೇ ನಿಪಿ-1 ರಲ್ಲಿರುವ ಒಕ್ಕಣಿಕೆ ಹಾಗೂ 1(ಎ) ಎಂದು ಬರೆದು ನನಗೆ ನೀಡಿರುತ್ತಾನೆ. ಅವು ಬೇರೆ ಬೇರೆ ಶಾಹಿಯಲ್ಲಿ ಇದ್ದರು ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ ಆದ್ದರಿಂದ ನಿಪಿ-1 ನ್ನು ಆರೋಪಿ ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ-

9 ಮತ್ತು 10 ರಲ್ಲಿ ನೀವು ಬ್ಯಾಂಕಿನಿಂದ ಸಾಲ ಪಡೆದ ಬಗ್ಗೆ ನಮೂದು ಆಗಿದೆ ಎಂದರೆ ಸಾಕ್ಷಿಯು ನನು ವ್ಯವಸಾಯಗೊಸ್ಕರ ಸಾಲ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**